ನಾವು ಇದರ ಬಗ್ಗೆ ತಿದ್ದುಪಡಿಯನ್ನು ಮಾಡಬೇಕೆಂಬ ಬಗ್ಗೆ ಪ್ರಯತ್ನಪಟ್ಟಿದ್ದೇವೆಯೇ ಹೊರತು ಅಧಿಕಾರವನ್ನು ಮೊಟಕುಗೊಳಿಸಬೇಕು ಎನ್ನುವಂತಹ ವಿಚಾರದಲ್ಲಿ ಅಲ್ಲ ಮತ್ತು ಹಣ ಸದ್ಬಳಕೆಯಾಗಬೇಕು. ಅಲ್ಲಿ ಹರಿದುಹಂಚಿಹೋಗಿ ಎಷ್ಟೊ ಸಂದರ್ಭದಲ್ಲಿ ಕೆಲಸ ಸರಿಯಾಗಿ ಆಗುತ್ತಿಲ್ಲ ಎನ್ನುವುದನ್ನು ಗಮನಕ್ಕೆ ಬಂದ ಮೇಲೆ ಕಾರ್ಯಕ್ರವನ್ನು ಮಾಡಿದ್ದೇವೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಈ ಸುವರ್ಣ ಕರ್ನಾಟಕ ಸಂದರ್ಭದಲ್ಲಿ ಒಂದು ಕರ್ನಾಟಕ ರಥ 4–5 ಪ್ರವಾಸಿ ಕೇಂದ್ರಗಳಿಗೆ ರಥವನ್ನು ಕಳುಹಿಸುವಂತಹ ಬಹಳ ಒಂದು ಅತ್ಯಂತ ಪ್ರಾಚೀನವಾದಂತಹ ಇತಿಹಾಸವನ್ನು ತಂದು ಅದರಲ್ಲಿ ಇಡೀ ನಾಡು ಮತ್ತು ದೇಶದ ಜನತೆಗೆ ಪ್ರಚಾರ ಮಾಡುವುದಕ್ಕೆ ಒಂದು ಹೊಸ ಯೋಜನೆಯನ್ನು ಕರ್ನಾಟಕ ಸರ್ಕಾರ ಕೈಗೊಂಡಿದೆ. ನಾವು ಅದನ್ನು ಸ್ವಾಗತಿಸುತ್ತೇವೆ. ಇದು ಬಹಳ ಒಳ್ಳೆಯ ಉದ್ದೇಶವಾಗಿದೆ. ಈ ಉದ್ದೇಶಕ್ಕಾಗಿ ಯೋಜನಾ ನಿರ್ದೇಶಕರು, ಈ ರಥ ಎಲ್ಲೆಲ್ಲಿ ಹೋಗುತ್ತದೆ ಎಂದರೆ, ಬೆಂಗಳೂರಿನಿಂದ ಹೊರಟು ಮೈಸೂರು, ಹಂಪೆ, ಹುಬ್ಬಳ್ಳಿ, ಬೆಳಗಾವಿಯ ಮೂಲಕ ಗೋವಾವನ್ನು ತಲುಪುವಂತಹದ್ದು ಈ ರಥಕ್ಕೆ ಕನ್ನಡದ ತೇರು ಎಂದು ಇದಕ್ಕೆ ಹೆಸರು.

ಈ ಒಂದು ರಥ ಇದರ ಹೆಸರೇ ಕನ್ನಡ ತೇರು ಎಂದು. ಇದಕ್ಕೆ ಒಬ್ಬ ಯೋಜನಾ ನಿರ್ದೇಶಕರು ಬೇಕಾಗುತ್ತದೆಂದು ಇವರು ಒಂದು ಟೆಂಡರು ಕರೆದಿದ್ದಾರೆ. ಅದು ಯಾವರೀತಿ ಕರೆದಿದ್ದಾರೆಂಬುದು ನಮಗೆ ಗೊತ್ತಿಲ್ಲ. ಯಾವ ಪತ್ರಿಕೆಯಲ್ಲಿ ಕರೆದಿದ್ದಾರೆಂಬುದು ಗೊತ್ತಿಲ್ಲ. ಇಡೀ ದೇಶದ ಎಲ್ಲರನ್ನು ಕರೆದಿದ್ದಾರೆ. ನನಗೆ ಅನ್ನಿಸುವ ಹಾಗೆ ಇಡೀ ದೇಶದ ಎಲ್ಲರನ್ನು ಕರೆಯಬೇಕಾದ ಅಗತ್ಯವಿರಲಿಲ್ಲ. ಕರ್ನಾಟಕದಲ್ಲೇ ಸಮರ್ಥರಾದಂಥ ಜನ ಅಧಿಕಾರಿಗಳಿದ್ದಾರೆ. ಕರ್ನಾಟಕದಲ್ಲಿ ಒಳ್ಳೆಯ ಉತ್ತಮ ಅಧಿಕಾರಿಗಳು ಇದ್ದಾರೆ. ಕರ್ನಾಟಕದಲ್ಲಿ ಕರ್ನಾಟಕವನ್ನು ಸಮಗ್ರವಾಗಿ ಬಲ್ಲವಂತಹವರು, ಗಡಿನಾಡು ಪ್ರವಾಸೋದ್ಯಮದ ಬಗ್ಗೆ ಸಂಪೂರ್ಣವಾಗಿ ಪರಿಚಯ ಇರತಕ್ಕಂಥ ಜನ ನಮ್ಮಲ್ಲಿ ಇದ್ದಾರೆ. ಇದನ್ನು ಬಿಟ್ಟು ಹೊರಗಡೆಯವರಾಗಲಿ ಯಾರೇ ಬರಲಿ ಒಟ್ಟು 120 ಜನ ಇದಕ್ಕೆ ಬಂದಿದ್ದು, 120 ಜನರಲ್ಲಿ ಮೂರು ಜನ. ಅವರಲ್ಲಿ ಕೇರಳದವರು ಒಬ್ಬರು ಆನಂದ ಮೆನನ್ ಎಂಬುವವರು, ಅವರು ಕರ್ನಾಟಕದವರಲ್ಲ, ಕನ್ನಡದ ರಥವನ್ನು ನಡೆಸುವುದಕ್ಕೆ ಯೋಜನಾ ನಿರ್ದೇಶಕರಾಗಿ

ಬರತಕ್ಕಂಥವರು ಯಾರು ಎಂದರೆ . . . ನಮ್ಮ ಕರ್ನಾಟಕದಲ್ಲಿ ಕನ್ನಡಿಗರು ಯಾರು ಇಲ್ಲವೇ IAS, IPS, KAS ಯಾರೂ ಇಲ್ಲವೆ? ಕರ್ನಾಟಕದಲ್ಲಿರುವಂಥ ಅಧಿಕಾರಿಗಳು ಸಂಪೂರ್ಣವಾಗಿ ಶಕ್ತಿಹೀನರು, ಈ ಯೋಜನೆಗೆ ಬರುವವರು ಯಾರು? ಕೇರಳದಿಂದ ಮೆನನ್ ಎಂಬುವವರು ಬರಬೇಕಾಯಿತು. ಇದು ಯಾವ ಉದ್ದೇಶ/ ಕೇರಳದ ಮೆನನ್ ಕನ್ನಡದ ರಥವನ್ನು ನಡೆಸಬೇಕೇ? ಈಗಾಗಲೇ ಕರ್ನಾಟಕದ, ಕನ್ನಡದ ಕಥೆ ಮುಗಿದಿದೆ. ಗಡಿನಾಡಿನಲ್ಲಿ ಕನ್ನಡ ಇಲ್ಲ. ರೈಲ್ವೇ ಇಲಾಖೆಯಲ್ಲಿ ಕನ್ನಡ ಇಲ್ಲ. ಇದೆಲ್ಲಾ ಏಕೆ ಹೇಳುತ್ತಿದ್ದೇನೆ ಇದರ ಉದ್ದೇಶವೇನೆಂದರೆ ತಮಗೆ ನಾನು ಮನವರಿಕೆ ಮಾಡುತ್ತಿದ್ದೇನೆ, ಸ್ವಲ್ಪ ಎರಡು ನಿಮಿಷ ಮಾತನಾಡುತ್ತೇನೆ. ಏಕೆಂದರೆ ಇವತ್ತು ಕನ್ನಡಕ್ಕೆ ಆಗಿರುವ ಆಘಾತ, ಕನ್ನಡಿಗರಿಗೆ ಆಗಿರುವ ಆಘಾತ, ಗಡಿನಾಡಿಗೆ ಅಗಿರುವ ಆಘಾತ, ಜೊತೆಗೆ ಇತ್ತೀಚೆಗೆ ನಾನು ತಮಗೆ ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ರೈಲು ಹೋಗತಕ್ಕಂಥದ್ದು. ರೈಲ್ವೆ ಇಲಾಖೆಯಲ್ಲಿ ಸಂಪೂರ್ಣ ಕನ್ನಡಗರನ್ನು ಮರೆಮಾಡುತ್ತಿದ್ದಾರೆ. ಕನ್ನಡಿಗರಿಗೆ ಉದ್ಯೋಗ ಇಲ್ಲ, ಕನ್ನಡದ ನಾಮಫಲಕ ಇಲ್ಲ, ಕನ್ನಡದವರನ್ನು ಕೇಳುವವರೇ ಇಲ್ಲ. ಅದು ಒಂದು ಕಡೆಯಾದರೆ ಇಲ್ಲಿ ಈ ರಥ ಯಾರದು? ಇದು ಕನ್ನಡದ ರಥ, ಅದಕ್ಕೆ ಕನ್ನಡದ ಹೆಸರಿದೆ. ಇದನ್ನು ಕೇರಳದ ಮೆನನ್ ಎನ್ನುವವರು ಯೋಜನಾ ನಿರ್ದೇಶಕರಾಗಿ ಈ ರಥ ನಡೆಸುವವರು, ಇದರ ವಿರುದ್ಧವಾಗಿ ಮೂರು ಜನ ಬಂದಾಗ. . . ಪ್ರವಾಸೋದ್ಯಮ ಸಚಿವರು ಈಗ ಸದನದಲ್ಲಿ ಇಲ್ಲ. ಅವರು ಏನು ಹೇಳುತ್ತಿದ್ದಾರೆಂದರೆ ಈ ಮೂರು ಜನರಲ್ಲಿ ಮೆನನ್ ಒಬ್ಬರು ಇದ್ದಾರೆ, ಆದರೆ ಮೆನನ್ ಅವರನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಇವರು ಕೇರಳದವರು ಯಾವುದೇ ಕಾರಣಕ್ಕೂ ಇವರು ರಥ ನಡೆಸಲಿಕ್ಕೆ ಆಗುವುದಿಲ್ಲ. ನಮ್ಮಲ್ಲಿ ಕನ್ನಡಿಗರೇ ಇದ್ದಾರೆ. ಈಗಲೂ ಕನ್ನಡಿಗರನ್ನೇ ತೆಗೆದುಕೊಳ್ಳಬೇಕು. ಕನ್ನಡಿಗರನ್ನು ತೆಗೆದುಕೊಳ್ಳದಿದ್ದರೆ ಕನ್ನಡಕ್ಕೆ ಅಪಚಾರ, ಕರ್ನಾಟಕಕ್ಕೆ ಅಪಚಾರ, ಈ ರಾಜ್ಯದಲ್ಲಿ ಕನ್ನಡಿಗರು ರಥವನ್ನು ಓಡಿಸುವುದಕ್ಕೆ ಯೋಗ್ಯತೆಯಿಲ್ಲವೆಂಬ ಪ್ರಶ್ನೆ ಬರುತ್ತದೆಂದು ಹೇಳಿ ಅಧಿಕಾರಿಗಳಿಗೆ ನೇರವಾಗಿ ಹೇಳುತ್ತಾರೆ. ಈ ಒಂದು ಇಲಾಖೆಯ ಅಧಿಕಾರಿ ತಮ್ಮ ಸ್ವಪ್ರತಿಷ್ಠೆಯಿಂದ ಮಂತ್ರಿಗಳ ಮಾತನ್ನು ತಳ್ಳಿಹಾಕಿದರು. ಸರ್ಕಾರದ ನೀತಿಯನ್ನು ತಳ್ಳಿಹಾಕಲಾಗಿದೆ. ಕರ್ನಾಟಕ, ಕನ್ನಡದ ರಾಜ್ಯದ ಸರ್ಕಾರದ ನೀತಿಯನ್ನು ಗಾಳಿಗೆ ತೂರಿದರು, ಮಂತ್ರಿಗಳ ಮಾತನ್ನು ದೂರೀಕರಿಸಿದ್ದಾರೆ. ಮಂತ್ರಿಗಳು ಕಡತದಲ್ಲಿ ನಮ್ಮಲ್ಲೇ ಅಧಿಕಾರಿಗಳು ಇದ್ದಾರೆ ಮೆನನ್ ಅವರನ್ನು

ತೆಗೆದುಕೊಳ್ಳಕೂಡದು ಎಂದು ಆ ಮೂರು ಜನರಲ್ಲಿ ಶ್ರೀ ಶ್ರೀನಿವಾಸನ್ ಎನ್ನುವವರು ಅಚ್ಚ ಕನ್ನಡಿಗರು, ಅತ್ಯಂತ ದಕ್ಷ ಅಧಿಕಾರಿ ಅವರನ್ನು ತೆಗೆದುಕೊಳ್ಳಿ ಎಂದು ಸಂಪೂರ್ಣವಾಗಿ ಬರೆದಿದ್ದಾರೆ. ಆದರೂ ಯಾವ ಕಾರಣಕ್ಕೂ ತೆಗೆದುಕೊಳ್ಳುವುದಿಲ್ಲ . . . ಒಂದು ನಿಮಿಷ ಮುಗಿಸುತ್ತೇನೆ.

ಅಧ್ಯಕ್ಷರು: ಪತ್ರಿಕಾ ಆಧಾರದ ಮೇಲೆ ಸುಮ್ಮನೆ ಏನೇನೋ ಹೇಳಿದರೆ ಹೇಗೆ... ಆಯಿತು ಈಗ ಸರ್ಕಾರದ ಪರವಾಗಿ ನೀವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್:– ಆಯಿತು, ಒಂದು ನಿಮಿಷ, ಇವತ್ತು ಈ ಮೆನನ್ ರವರ ಆಯ್ಕೆಯನ್ನು ರದ್ದುಪಡಿಸಲೇಬೇಕು. ಮೆನನ್ ಅವರನ್ನು ಒಪ್ಪುವುದಾದರೆ ರಥವನ್ನು ಓಡಿಸಲಿಕ್ಕಾಗುವುದಿಲ್ಲ. ಎಲ್ಲಿಯೂ ಆ ರಥವನ್ನು ಓಡಲಿಕ್ಕೆ ಬಿಡುವುದಿಲ್ಲ. ದೊಡ್ಡ ಗಲಾಟೆ ಆಗುತ್ತದೆ. ಆದ್ದರಿಂದ ಸಕಾರಕ್ಕೂ ಗೌರವ ಬರಬೇಕಾದರೆ, ಸರ್ಕಾರಕ್ಕೆ ಕನ್ನಡದ ಬಗ್ಗೆ ಅಭಿಮಾನವಿದ್ದರೆ, ಸರ್ಕಾರದ ನೀತಿ ಕನ್ನಡದ ಪರವಿದ್ದರೆ ಇವತ್ತು ಇದನ್ನು ಸ್ಪಷ್ಟವಾಗಿ ಮಾನ್ಯ ಹಿರಿಯ ಸಚಿವರು ಗೃಹ ಸಚಿವರು ಅವರ ಹಂಪಿ ಮೇಲೆಯೂ ಈ ರೈಲು ಹೋಗುತ್ತದೆ. ಹಾಗಾಗಿ ಇದರ ಬಗ್ಗೆ ಅವರ ಗಮನವನ್ನು ಸೆಳೆಯುತ್ತೇನೆ. ದಯಮಾಡಿ ಈ ಕಡತವನ್ನು ತಡೆಹಿಡಿದು ಮತ್ತೊಮ್ಮೆ ಅದನ್ನು ಪರಿಶೀಲಿಸಿ ಕನ್ನಡಿಗರಿಗೆ ಆದ್ಯತೆ ಕೊಡಬೇಕೆಂಬ ಮಾತನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ. ಮಾನ್ಯ ಸಚಿವರು ಇದರ ಬಗ್ಗೆ ಉತ್ತರಿಸಬೇಕು. ಇದಕ್ಕೆ ಪ್ರವಾಸೋದ್ಯಮ ಸಚಿವರು ಉತ್ತರಿಸಬೇಕು. ಅವರ ಬದಲಿಗೆ ಪ್ರಕಾಶ್‌ರವರು ಉತ್ತರ ಹೇಳಬಹುದು. ಅವರಿಗೆ ಕನ್ನಡ ಕರ್ನಾಟಕದ ಬಗ್ಗೆ ಸಂಪೂರ್ಣ ಇತಿಹಾಸ ಜ್ಞಾನವಿದೆಯೆಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು.

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು): ಇಲ್ಲಿ Wheels on Palace ಅಂತಲೋ Palace on Wheels ಅಂತಲೋ ಒಂದು Southern Splendor ಎಂದು ರೇಣುಕಾ ಚೌಧರಿಯವರು ದಕ್ಷಿಣ ಭಾರತದಲ್ಲಿ ಮಾಡಬೇಕೆಂದು ಹೊರಟಿದ್ದರು. ಆದಾದ ಮೇಲೆ ಗಾಲಿಗಳ ಮೇಲೆ ಅರಮನೆ ಎಂಬ ಒಂದು ಯೋಚನೆಯನ್ನು ಮಾಡಿ. ಈ ಮೈಸೂರು, ಶ್ರವಣಬೆಳಗೊಳ, ಹಂಪಿ, ಬಾದಾಮಿ, ಬನಶಂಕರಿ, ಬಿಜಾಪುರಕ್ಕೆ ಹೋಗಿ ಬೆಂಗಳೂರಿಗೆ ವಾಪಸ್ಸು ಬರುವಂಥ ವ್ಯವಸ್ಥೆಯನ್ನು

ಪ್ರವಾಸೋದ್ಯಮ ಇಲಾಖೆಯವರು ಏರ್ಪಾಡು ಮಾಡಿದ್ದರು. ಆ ಸಂದರ್ಭದಲ್ಲಿ ಯಾವ್ಯಾವುದೋ ಕಾರಣದಿಂದ ಕೇಂದ್ರ ಸರ್ಕಾರದವರು ಪ್ರಕಟಣೆ ಮಾಡಿ ಆ ಕೆಲಸ ಆಗಲಿಲ್ಲ. ಆಗ ನಮ್ಮ ಪ್ರವಾಸೋದ್ಯಮ ಸಚಿವರು ಮತ್ತು ನಮ್ಮ ಸರ್ಕಾರ ಇದರ ಬಗ್ಗೆ ಆಸಕ್ತಿಯನ್ನು ತಳೆದು ಅದನ್ನು ಕಾರ್ಯಗತಗೊಳಿಸಲಿಕ್ಕೆ ಮಾಡಿದಾಗ ಅದರ ನಿರ್ವಹಣೆ ಮಾಡಲಿಕ್ಕೆ ಅವರು ಟೆಂಡರು ಕರೆದಿದ್ದರು ಎಂದು ಪತ್ತಿಕೆಯಲ್ಲಿ ಇರುವಷ್ಟನ್ನೇ ನಾನು ಓದಿದ್ದೇನೆ. ಈಗ ಇದರ ಬಗ್ಗೆ ಎಲ್ಲಾ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ. ಪತ್ರಿಕೆಯಲ್ಲಿಯೂ ಕೂಡ ಸಂಬಂಧಪಟ್ಟ ಕಾರ್ಯದರ್ಶಿಯವರು ಬೇರೆಯವರು ಯಾರೂ ಇರಲಿಲ್ಲ, ಕೇವಲ ಮೂರು ತಿಂಗಳೂ ಪೂರ್ತಿ ಇರತಕ್ಕಂಥ ಕೆಲಸವಿದು ಆದ್ದರಿಂದ ಸಮರ್ಥವಾಗಿ ಕಂಡುಬಂದಂಥ ಈ ಕೇರಳದ ಆನಂದ ಮೆನನ್ ಎಂಬುವವರನ್ನು ನೇಮಕಾತಿ ಮಾಡಿದ್ದೇವೆಂಬ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸಚಿವರು ಶ್ರೀನಿವಾಸನ್ ಎಂಬ ಕನ್ನಡದವರೊಬ್ಬರು ಇರುವುದರಿಂದ ಅವರನ್ನು ನೇಮಕ ಮಾಡಬೇಕಾಗಿತ್ತು ಕನ್ನಡದ ರಥವನ್ನು ನಡೆಸಲಿಕ್ಕೆ ಕೇರಳದವರು ಏತಕ್ಕೆ ಎಂಬ ರೀತಿಯಲ್ಲಿ ಪತ್ರಿಕೆಯಲ್ಲಿ ವರದಿಯಾಗಿದೆ. ತಾವು ಈ ಕೂಡಲೇ ಈ ವಿಚಾರವನ್ನು ಪ್ರಸ್ತಾಪ ಮಾಡಿರುವುದರಿಂದ ನಾನು ಪ್ರವಾಸೋದ್ಯಮ ಇಲಾಖೆಯವರಿಂದ ವಾಸ್ತವ ಸಂಗತಿಯನ್ನು ತಿಳಿದುಕೊಂಡು ಅವರ ವರದಿಯನ್ನು ಕೋಡಬೇಕೆಂದು ಹೇಳಿದ್ದೇನೆ. ಆ ವರದಿ ಬಂದ ತಕ್ಷಣ ಸದನಕ್ಕೆ ಆ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಇದೇನು ಹೊಸದಲ್ಲ, ನೀವು ಹೇಳಿ, ಮೇನನ್ ಎಂಬುವವರ ನೇಮಕಾತಿಯನ್ನು ರದ್ದು ಮಾಡಲಾಗಿದೆ ಎಂದು ತಾವು ಹೇಳಿ. ಒಬ್ಬ ಕೇರಳದ ವ್ಯಕ್ತಿಯನ್ನು ನೇಮಕ ಮಾಡಿದ್ದಾರೆಂದು ಇದರಲ್ಲಿ ಸ್ಪಷ್ಟವಾಗಿದೆ. ತಾವೇನು ಮುಂದೆ ಹೇಳುತ್ತೇವೆನ್ನುವುದಕ್ಕೆ ಅದರಲ್ಲಿ secret ಏನೂ ಇಲ್ಲ. ಮೂರೇ ಜನ ಉಳಿದಿರುವವರು ಮೆನನ್ ಶ್ರಿ ನಿವಾಸನ್ ಮತ್ತೊಬ್ಬರು ಶ್ರೀನಿವಾಸನ್ ರವರನ್ನೇ ಮಾಡಿ ಯಾರನ್ನಾದರೂ ಮಾಡಿ ಕರ್ನಾಟಕದ ಕನ್ನಡಿಗರನ್ನು ಮಾಡಿ ನನ್ನದೇನೂ ಅಭ್ಯಂತರವಿಲ್ಲ. ಮೆನನ್ ಅವರನ್ನು ನೇಮಕ ಮಾಡತಕ್ಕಂಥ ಉದ್ದೇಶ ಇದರ ಬಗ್ಗೆ ತಾವು ಹೇಳಿ. ತಾವು ಮೆನನ್ ಅವರ ನೇಮಕವನ್ನು ನಿಲ್ಲಿಸುತ್ತೇವೆಂಬ ಮಾತನ್ನು ಸ್ಪಷ್ಟವಾಗಿ ಹೇಳಿ. ಈಗ ಮಂತ್ರಿಗಳು ಬಂದು ಏನು ಮಾಡುತ್ತಾರೆ?

ಅಧ್ಯಕ್ಷರು: ಆಯಿತು, ಅವರು ಹೇಳುತ್ತಾರೆ ಬಿಡಿ.

ಶ್ರೀ ವಾಟಾಳ್ ನಾಗರಾಜ್: ಅವರು ಹೇಳುತ್ತಾರೆ ಬಿಡಿ ಎಂದು ಇದನ್ನು ಅಷ್ಟು ಸುಲಭವಾಗಿ ಬಿಡುವುದಕ್ಕಾಗುವುದಿಲ್ಲ. ದಯಮಾಡಿ ತಮಗೆ ಹೇಳುತ್ತೇನೆ. ನನಗೆ ಸ್ಪಷ್ಟವಾಗಿ ಮೆನನ್ ಅವರನ್ನು ನೇಮಕ ಮಾಡುವುದಿಲ್ಲವೆಂದು ಸರ್ಕಾರ ಹೇಳಲೇಬೇಕು. ಇದು ಒತ್ತಾಯಕ್ಕೆ ಮಾಡುವುದೆಂದಲ್ಲ. ಇದು ಅತಿರೇಕ ಆಯಿತು. ಇದು ನಮ್ಮ ಕರ್ನಾಟಕ ರಾಜ್ಯಕ್ಕೆ ನಾಡಿಗೆ ಮಾಡಿದಂಥ ಅಪರಾಧವಾಗುತ್ತದೆ. ಆದ್ದರಿಂದ ಮಾನ್ಯ ಸಚಿವರಲ್ಲಿ ಕೈಮುಗಿದು ಕೇಳುತ್ತೇನೆ. ದಯಮಾಡಿ ಉತ್ತರ ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್: ಈಗ ಸನ್ಮಾನ್ಯ ಅಧ್ಯಕ್ಷರೇ, ನಮ್ಮ ವೈಯಕ್ತಿಕ ಅಭಿಪ್ರಾಯಗಳೇನೇ ಇರಲಿ. ಸರ್ಕಾರ ನಿರ್ವಹಣೆ ಮಾಡಬೇಕಾಗಿರುವಂಥ ಸಂದರ್ಭದಲ್ಲಿ ಅದರ ಸನ್ನಿವೇಶಗಳು ಏನು? ತಾವು ಕೂಡ ಇದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸಂಪೂರ್ಣವಾಗಿ ಬರಹದ ಮೂಲಕವೂ ಕಳುಹಿಸಿಲ್ಲ. ಪ್ರವಾಸೋದ್ಯಮ ಇಲಾಖಾ ಕಾರ್ಯದರ್ಶಿಯವರು ಇಲ್ಲಿಲ್ಲ. ಯಾವ ಹಿನ್ನೆಲೆಯಲ್ಲಿ ಈ ನೇಮಕವಾಯಿತು ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ನೀವು ಹೇಳಿದಂಥ ಮಾತನ್ನು ನಾನು ವೈಯಕ್ತಿಕವಾಗಿ ಒಪ್ಪಬಹುದು. ಕನ್ನಡಿಗರೇ ಇರುವುದರಿಂದ ಅನೇಕ ಕೆಲಸ ಕಾರ್ಯಗಳು ಆಗಲಿಕ್ಕೆ ಸಾಧ್ಯತೆ ಇದೆ ಎಂಬುದನ್ನು ಒಪ್ಪಬಹುದು. ಆದರೆ ಇದರ ಬಗ್ಗೆ ನೇರವಾಗಿ ಉತ್ತರಿಸಬೇಕಾದರೆ ಕಾಲಾವಕಾಶ ಬೇಕಾಗುತ್ತದೆ. ಈ ದಿನ ಸಾಯಂಕಾಲ ಅಥವಾ ನಾಳೆ ಬೆಳಿಗ್ಗೆ ಇಲಾಖೆಯ ಪ್ರತಿಕ್ರಿಯೆಯನ್ನು ತೆಗದುಕೊಂಡು ಸಂಪೂರ್ಣವಾದ ಚಿತ್ರವನ್ನು ನಾನು ಈ ಸದನದ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಆಯಿತು, ಬಿಡಿ, ಅವರು ಹೇಳಿದ್ದಾರೆ. ನಾಗರಾಜ ರವರೇ ಅವರು ಹೇಳುತ್ತಿದ್ದಾರೆ ತಾವು ಮತ್ತೆ ಮತ್ತೆ ಅದರ ಬಗ್ಗೆ ಮಾತನಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ಇದು ಸರಿಯಲ್ಲ. ನೀವೇನು ಬೇಕಾದರೂ ಹೇಳಿ. ನಾನು ಧರಣಿ ಕುಳುತುಕೊಳ್ಳುತ್ತೇನೆ. ಇದರಿಂದ ನನಗೆ ಬಹಳ ನೋವಾಗಿದೆ. ಇದರಿಂದ ನಮ್ಮ ರಾಜ್ಯಕ್ಕೆ ಮಾಡಿದಂತ ತೀವ್ರವಾದ ಅವಮಾನವಾಗಿದೆ.

(ಗೊಂದಲ)

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸದನ ಬಾವಿಗಿಳಿದು ಮಾತನಾಡುತ್ತಿದ್ದರು)

ಶ್ರೀ ಎಂ. ಪಿ. ಪ್ರಕಾಶ್: ನಿಮಗೆಷ್ಟು ಕನ್ನಡದ ಬಗ್ಗೆ ಅಭಿಮಾನವಿದೆಯೋ ನನಗೂ ಕೂಡ ಅಷ್ಟೇ ಅಭಿಮಾನವಿದೆ . . .

ಅಧ್ಯಕ್ಷರು: ನೀವು well ನೊಳಗೆ ಬರಬೇಡಿ. ಈಗ ನಿಮ್ಮದೇ ಆದಂಥ ಒಂದು ಅಭಿಪ್ರಾಯವಿದೆ ಸರ್ಕಾರದವರು ಅದಕ್ಕೆ ಏನೋ ಉತ್ತರ ಹೇಳುತ್ತಿದ್ದಾರೆ ನೀವು ಪ್ರತಿಯೊಂದಕ್ಕೂ ಪ್ರತಿಭಟನೆ ಮಾಡುತ್ತಿದ್ದರೆ ನಾವು ಸದನವನ್ನು ನಡೆಸುವುದು ಹೇಗೆ?

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ: ವಾಟಾಳ್ ನಾಗರಾಜ್‌ರವರೇ, ಅವರು ಉತ್ತರವನ್ನೇ ಕೊಡುವುದಿಲ್ಲ ನೀವು ಧರಣಿ ಮಾಡಿದರೆ ಹೇಗೆ? ಅವರೇನು ಉತ್ತರ ಕೊಡುತ್ತಾರೆ ನೋಡಿ. ನೀವು ದಯವಿಟ್ಟು ಸ್ಥಾನಕ್ಕೆ ಬನ್ನಿ. ಅವರು ಆ ಮೇಲೆ ಉತ್ತರ ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ: ಮಂತ್ರಿಗಳು ಉತ್ತರ ಕೊಡುತ್ತಾರೆ. ಆ ಮೇಲೆ ನೀವು ಮಾತನಾಡಿ.

ಶ್ರೀ ಎಂ. ಪಿ. ಪ್ರಕಾಶ್: ಆ ಮಾಹಿತಿಯನ್ನು ಇಲಾಖೆಯಿಂದ ತರಿಸಿಕೊಂಡು ನಾನು ನಂತರ ಉತ್ತರವನ್ನು ಕೊಡುತ್ತೇನೆ. ಇವತ್ತು ಸಾಧ್ಯವಾದರೆ ಇಂದು ಸಂಜೆ ಅಥವಾ ನಾಳೆ ಬೆಳಿಗ್ಗೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು: ಆಯಿತು, ನಿಮ್ಮ ಸ್ಥಾನಕ್ಕೆ ನೀವು ಹೋಗಿ ಕುಳಿತುಕೊಳ್ಳಿ

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ರವರು ತಮ್ಮ ಸ್ಥಾನದಲ್ಲಿ ಬಂದು ಆಸೀನರಾದರು)

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ): ಸಭಾಧ್ಯಕ್ಷರೇ, ಮೊನ್ನೆ ತಾನೇ ಜರುಗಿರುವ ನಕ್ಸಲೈಟ್ ಚಟುವಟಿಕೆಯನ್ನು ನಾವೆಲ್ಲರೂ ಗಮನಿಸಿದ್ದೇವೆ. ಆ ಹಿನ್ನೆಲೆಯಲ್ಲಿ ಪಶ್ಚಿಮಘಟ್ಟದ ತಪ್ಪಲಿನಲ್ಲಿ ಕಾರ್ಯಾಚರಣೆಯಾಗುತ್ತಿದೆ. ಅಲ್ಲಿ encounter ಆದನಂತರ ಮೊನ್ನೆ ದಿನ ಪುನಃ ಅಲ್ಲಿ ನಕ್ಸಲೈಟ್ ಚಟುವಟಿಕೆ ಜಾಸ್ತಿಯಾಗಿದೆ. ಪ್ರತಿ ಮನೆ ಮನೆಗೂ ನುಗ್ಗಿ ದರೋಡೆ ಮಾಡುವಂತಹ ಸ್ಥಿಗೆ ನಕ್ಸಲೇಟರು ಬಂದಿದ್ದಾರೆ. ಅಲ್ಲಿನ 3–4 ಮನೆಗಳನ್ನು ದರೋಡೆ ಮಾಡುವ ಮೂಲಕ ನಗದು, ಬಂಗಾರದ ಒಡವೆಗಳನ್ನು ದೋಚಿಕೊಂಡು ಹೋಗಿದ್ದಾರೆ. ದರೋಡೆ ಮಾಡಿ ಹೋಗುವಾಗ ಮೊನ್ನೆ encounter ನಲ್ಲಿ ಸತ್ತವರಿಗೆ ಪರಿಹಾರ ಕೊಡಲು ನಾವು ಇದನ್ನು ಮಾಡುತ್ತಿದ್ದೇವೆ ಎಂಬ ವಿಚಾರ ಹೇಳುತ್ತಾ ಜೊತೆಗೆ ಶಾಸಕರಾದ ಅರಗ ಜ್ಞಾನೇಂದ್ರರವರಿಗೆ ಜೀವ ಬೆದರಿಕೆ ಹಾಕಿದ್ದಾರೆ. ಮುಂದಿನ ಗುರಿ ನಿಮ್ಮದೇ ಎಂಬ